

## ಬಾನು ಮುಷ್ತಾಕ್

ಹಾಸನದಲ್ಲಿ ನೆಲೆಸಿರುವ ಬಾನು ಮುಷ್ತಾಕ್ ಅವರು ನ್ಯಾಯವಾದಿಯಾಗಿ ಕೆಲಸ ಮಾಡುತ್ತಿದ್ದಾರೆ. ಬಿ.ಎಸ್ಸಿ., ಎಲ್.ಎಲ್.ಬಿ. ವರೆಗೆ ವಿದ್ಯಾಭ್ಯಾಸ. ಕನ್ನಡ ಕಥಾಸಾಹಿತ್ಯದ ಪ್ರಮುಖ ದನಿ ಬಾನು ಅವರದು. ಈ ತನಕ ಕನ್ನಡಿಗರಿಗೆ ಪರಿಚಯವಿರದ ಮನುಷ್ಯ ಲೋಕವನ್ನು, ಅವರ ಹಾಡು–ಪಾಡುಗಳನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಅವರ ಆ ಕಥಾಲೋಕ ಅತ್ಯಂತ ವಿಶಿಷ್ಟ ಮತ್ತು ದಟ್ಟವಾಗಿದೆ. 'ಹೆಜ್ಜೆ ಮೂಡಿದ ಹಾದಿ', 'ಬೆಂಕಿ ಮಳೆ', 'ಎದೆಯ ಹಣತೆ', 'ಸಫೀರಾ', 'ಬಡವರ ಮಗಳು ಹೆಣ್ಣಲ್ಲ', 'ಹಸೀನಾ ಮತ್ತು ಇತರ ಕಥೆಗಳು' ಅವರ ಕಥಾ ಸಂಕಲನಗಳು. 'ಹೂ ಕಣಿವೆಯ ಚಾರಣ' ಪ್ರಬಂಧಗಳ ಸಂಕಲನವಾದರೆ, 'ಇಬ್ಬನಿಯ ಕಾವು' ಅವರ ಲೇಖನಗಳ ಸಂಗ್ರಹವಾಗಿದೆ. ಕವನ ಸಂಕಲನ: 'ಒದ್ದೆ ಕಣ್ಣಿನ ಬಾಗಿನ'.

ಅವರ ಅನೇಕ ಕತೆಗಳು ಹಿಂದಿ, ಮಲಯಾಳಂ, ತಮಿಳು, ಪಂಜಾಬಿ, ಉರ್ದು, ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ. ಅವರ 'ಕರಿನಾಗರಗಳು' ಎಂಬ ಕತೆಯನ್ನು ಆಧರಿಸಿ ಗಿರೀಶ ಕಾಸರವಳ್ಳಿ ಅವರು ನಿರ್ದೇಶಿಸಿದ 'ಹಸೀನಾ' ಸಿನಿಮಾ ಮೂರು ರಾಷ್ಟ್ರಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಆದಿಲ್‌ಶಾಹಿ ಇತಿಹಾಸ ಪುಸ್ತಕ 'ತಾರೀಕ್ – ಎ – ಫರಿಷ್ತಾ'ವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅವರು ಹಲವು ಸಾಹಿತ್ಯ ಸಂಸ್ಥೆಗಳ ಸದಸ್ಯರಾಗಿದ್ದರು. ಇದಲ್ಲದೇ ಎರಡು ಅವಧಿಗೆ ಹಾಸನ ನಗರ ಸಭೆಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ.

ತೋರಿ ಅಪ್ಪಳಿಸಿತು. ನಾನು ಮಲಗಿದ್ದಾಗ ನನ್ನೊಡನೆ ಹಾಸಿಗೆಯಲ್ಲಿ ಪಕ್ಕದಲ್ಲಿ ಮಲಗಿತ್ತು. ನಾನು ಚಿಟ್ಟನೆ ಚೀರಿ ರಾತ್ರಿಯಲ್ಲಿ ಎದ್ದು ಕೂರಲಾರಂಭಿಸಿದೆ. ಕೊನೆಗೆ ಅದು ಎಲ್ಲೋ ನನ್ನದೆಯ ಮೂಲೆಯಲ್ಲಿ ಆಶ್ರಯ ಪಡೆಯಿತು. ಆಗಾಗ್ಗೆ ನನ್ನೊಡನೆ ಗೆಳೆತನ ಮಾಡಲು ಪ್ರಯತ್ನಿಸುತ್ತದೆ. ಆದರೆ ನಾನು ಇದುವರೆಗೆ ಆಸ್ಪದ ಕೊಟ್ಟಿಲ್ಲ. ಆಮೇಲೆ ಯಾವುದೋ ಹಂತದಲ್ಲಿ ಅದರ ಹೆಸರು ಚಿಪ್ಪುಹಂದಿ ಎಂದು ನನಗೆ ತಿಳಿದು ಬಂದಿತು. ಆ ಚಿಪ್ಪುಹಂದಿ ಯಾವ ಕತೆಯಲ್ಲಿಯೂ ತನ್ನ ಇರುವನ್ನು ಪ್ರಕಟ ಪಡಿಸಿಲ್ಲ. ಮಹಾ ಆಲಸ್ಯದ ಸೋಮಾರಿ ಪ್ರಾಣಿಯದು. ಅದರ ಸುತ್ತಲೂ ನನ್ನ ಕಲ್ಪನೆ ಗರಿಗೆದರಲೇ ಇಲ್ಲ. ಅದರಿಂದ ನನಗೂ ನನ್ನಿಂದ ಅದಕ್ಕೂ ಇದುವರೆವಿಗೂ ಬಿಡುಗಡೆ ದೊರಕಿಲ್ಲ. ಯಾರಿಗೂ ಕಾಣದ ನೋಟ ನನಗೆ ಯಾತಕ್ಕೆ ಕಾಣುತ್ತದೆ? ಯಾರಿಗೂ ಕೇಳಿಸದ ಎದೆ ಬಡಿತಗಳು ನನ್ನ ಕಿವಿಗೆ ಯಾಕೆ ಅಪ್ಪಳಿಸುತ್ತವೆ? ಇಲ್ಲಿ ನನ್ನ ಕತೆಗಳ ಅಂಕುರವಾಗುತ್ತದೆ.

ನನಗೆ ವಿವಿಧ ರೀತಿಯ ಅನುಭವಗಳಾಗಿವೆ. ಅಲ್ಪಸಂಖ್ಯಾತ ಸಮುದಾಯದ ಮಹಿಳೆಯಾಗಿ ನನ್ನೆದುರು ತೆರೆದುಕೊಂಡ ಜಗತ್ತು ವಿಚಿತ್ರ ಮತ್ತು ಅಪಾರ ಸವಾಲುಗಳಿಂದ ಕೂಡಿದುದಾಗಿದೆ.